ಸಣ್ಣ ರೈತರಿಗೆ ಕೃಷಿ ಪಾಸ್ ಪುಸ್ತಕ ನೀಡುವ ಬಗ್ಗೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 60 : (248)

ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ,
ಎನ್.ಹೆಚ್.(ಗೌರಿಬಿದನೂರು)

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರಸಂ.	ಪ್ರಶ್ನೆ
ಅ.	ಪ್ರತಿ ವರ್ಷ ರೈತರಿಗೆ ಕೃಷಿ ಇಲಾಖೆಯಿಂದ ಸವಲತ್ತುಗಳನ್ನು ಪಡೆಯಲು ಸಣ್ಣ ರೈತರ ಪ್ರಮಾಣ ಪತ್ರ ಪಡೆಯಲು ಪ್ರತಿ ರೈತರಿಗೂ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕೆ ಬಂದಿದೆಯೇ. Has it come to the notice of the Govt. that the small farmers are facing difficultics to got small farmers certificates to avail the benefits from the Department.
ಉತ್ತರ	
	ಹೌದು yes
ಕ್ರಸಂ.	ಪ್ರಶ್ನೆ
ಆ.	ಹಾಗಿದ್ದಲ್ಲಿ. ಇದನ್ನು ತಪ್ಪಿಸಲು ಆಂದ್ರಪ್ರದೇಶದಲ್ಲಿರುವಂತೆ ರೈತರಿಗೆ ಕೃಷಿ ಪಾಸ್ ಪುಸ್ತಕವನ್ನು ನೀಡಲು ಸಾಧ್ಯವಿಲ್ಲವೇ. if so. to avoid these difficulties is it not possible to provide farmers passbook as in Andra Pradesh.
ಉತ್ತರ	
	–ಸಾಧ್ಯವಿದೆ– possible
ಕ್ರಸಂ.	ಪ್ರಶ್ನೆ
ಇ.	ಸದರಿ ಪುಸ್ತಕ ಪಡೆಯುವ ಮೂಲಕ ಸರ್ಕಾರದ ಬೇರೆ ಬೇರೆ ಇಲಾಖೆಗಳಿಂದಲೂ ರೈತರಿಗೆ ಅನುಕೂಲವಾಗುವುದಿಲ್ಲವೇ. Is it not helpful to the farmers to avail benefits from other departments. through these passbooks.

ಉತ್ತರ

–ಅನುಕೂಲವಾಗುವುದು– –Yes. it will benefit farmer.

ಕ್ರ.ಸಂ. ಪ್ರಶ್ನೆ

ಈ. ಕೃಷಿ ಪಾಸ್ ಪುಸ್ತಕವನ್ನು ಪಡೆಯಲು ಇಚ್ಚಿಸುವ ರೈತರಿಗೆ ಯಾವಾಗ ಒದಗಿಸಲಾಗುವುದು.

When will the Govt. Supply pass books to willing farmers.

ಉತ್ತರ

ಎರಡು ಕೃಷಿ ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ಕೃಷಿ ಪಾಸು ಪುಸ್ತಕದ ನಮೂನೆಯನ್ನು ತಯಾರಿಸಲಾಗುತ್ತಿದೆ.

The format of the Agriculture Pass Book is being prepared by both the Universities of Agricultural Sciences.

ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ: ಉತ್ತರವನ್ನೊದಗಿಸಿದ್ದಾರೆ. ಪ್ರತಿ ವರ್ಷ ರೈತರು ಕೃಷಿ ಇಲಾಖೆಯಿಂದ ಕೊಡುವ ಸವಲತ್ತು ಇರಬಹುದು. manure ಗೊಬ್ಬರ ಇರಬಹುದು ಅಥವಾ ಬೀಜವಿರಬಹುದು. ಪ್ರತಿಯೊಂದು ಸಲ ಸಣ್ಣ ರೈತರು ಪ್ರಮಾಣ ಪತ್ರ ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ಸಂದರ್ಭದಲ್ಲಿ Revenue Secretary ಗಳು ಕಾಟ ಕೊಡುತ್ತಾರೆ. ಇದು Continued scheme ಆಗಿರುವುದರಿಂದ. ನನಗೆ ತಿಳಿದ ಮಟ್ಟಿಗೆ ಆಂಧ್ರಪ್ರದೇಶದಲ್ಲಿ ಕೃಷಿ ಪಾಸ್ ಪುಸ್ತಕ ಮಾಡಿದ್ದಾರೆ. ಆ ಪಾಸ್ ಪುಸ್ತಕವನ್ನು ಅಲ್ಲಿ ಕೊಟ್ಟರೆ. ಇಲಾಖೆಯ ಮೂಲಕ ಅವರಿಗೆ ಬೇಕಾದಂಥ ಸವಲತ್ತುಗಳು ಏನೇ ಇರಬಹುದು. ಅವುಗಳನ್ನು ಇಲಾಖೆಯ ಮುಖಾಂತರ ಕೊಡುವುದು ಆಗಿಂದ್ದಾಗೆ ಆಗುತ್ತದೆ. ರೇಷನ್ ಪದ್ಧತಿ ತರಹ ಒಬ್ಬ ರೈತನಿಗೆ ಒಂದೇ ಮೂಟೆ manure ಕೊಡುವ ಹಾಗೆ ಮಾಡಿದ್ದಾರೆ ಆ ಸಣ್ಣ ರೈತ certificate ತೆಗೆದುಕೊಳ್ಳುವುದಕ್ಕೆ ಬಹಳ ತೊಂದರೆಯಾಗುತ್ತದೆ. secretary ಯವರನ್ನು ಹುಡುಕಿಕೊಂಡು ಹೋಗಿ ಮಾಡುವಷ್ಟರಲ್ಲಿಯೇ ಅನೇಕ ಅನುಕೂಲವಾಗುತ್ತದೆಂದು ಭಾವಿಸುತ್ತೇನೆ. ಅದನ್ನು ಮಾನ್ಯ ಮಂತ್ರಿಯವರು ಪರಿಗಣಿಸಿ. ಕನಿಷ್ಟ ಮುಂದಿನ ಸೀಸ್‌ನ್‌ಗೆ ಎಲ್ಲ ಸಣ್ಣ ರೈತರಿಗೆ ಆ ಕೃಷಿ ಪಾಸ್ ಪುಸ್ತಕ ಕೊಡುವುದು ಮಾಡಬೇಕು. ಹಿಂದೆ Revenue ಇಲಾಖೆಯಲ್ಲಿ ಪಟ್ಟಾ ಪುಸ್ತಕವೆಂದು ಕೊಡುತ್ತಿದ್ದರು. ಅದಕ್ಕೆ ಫೋಟೋ ಹಾಕಿಸಿ ಜೊತೆಗೆ ಕೃಷಿಗೆ ಸಂಬಂಧಪಟ್ಟಂಥದ್ದನ್ನು ವಿತರಣೆ ಮಾಡತಕ್ಕಂಥದ್ದು ಅದಕ್ಕೇ ಸೇರಿಸಿ ಕೊಟ್ಟರೆ ಕೂಡ ನಡೆಯುತ್ತದೆ. ನಾನು ಆಂಧ್ರ ಪ್ರದೇಶದ ಎರಡು ಮಾಡೆಲ್‌ಗಳನ್ನು ತರಿಸಿದ್ದೇನೆ. ಬೇಕಾದರೆ. ತಮಗೆ ಆ ಮಾಹಿತಿ ಕೊಡುತ್ತೇನೆ. ಅದನ್ನು ಇನ್ನೂ ಸ್ವಲ್ಪ improvise ಮಾಡಿ. ಪ್ರತಿಯೊಬ್ಬ ಸಣ್ಣ ರೈತರಿಗೆ ಕೃಷಿ ಪಾಸ್ ಪುಸ್ತಕ ಕೊಟ್ಟರೆ ಎಲ್ಲ ರೀತಿಯಾದ ಸೌಲಭ್ಯಗಳನ್ನು ಆ ಪಾಸ್ ಪುಸ್ತಕದ ಮುಖಾಂತರ ನೀಡತಕ್ಕಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದೆನ್ನುವುದು ನನ್ನ ಭಾವನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ ; ಪಾಸ್ ಬುಕ್ ಕೊಡುವುದು ಸ್ವಲ್ಪ ತಡವಾಗುತ್ತದೆ. ಒಬ್ಬ ಸಣ್ಣ ರೈತ ಗೊಬ್ಬರ ಪಡೆಯಬೇಕಾದರೆ. ಸಣ್ಣ ರೈತ ಎನ್ನುವ certificate ಮತ್ತು income certificate ತೆಗೆದುಕೊಳ್ಳಬೇಕು. ಒಂದು ವರ್ಷ ಅದನ್ನು ತೆಗೆದುಕೊಂಡರೆ, ಅದರ ನಕಲನ್ನು ಕೊಟ್ಟರೆ, ಕೃಷಿ ಇಲಾಖೆ, ಯಾವುದೇ ಇಲಾಖೆ ಇರಬಹುದು. ಅಲ್ಲಿ ಪಾಸ್ ಬುಕ್ ಕೊಡುವುದಕ್ಕೆ ಸ್ವಲ್ಪ ಸಮಯ ಹಿಡಿಯಬಹುದು ಎನಿಸುತ್ತದೆ. ದಯವಿಟ್ಟು. ಒಂದು ಸಲ ತೆಗೆದುಕೊಳ್ಳುವ certificate ಗಳಿಗೆ ಒಂದು ಅವಧಿಯನ್ನು fix ಮಾಡಿ. ಏಕೆಂದರೆ. ಪ್ರತಿಯೊಂದಕ್ಕೂ ಕೂಡ ಕಂದಾಯ ಇಲಾಖೆಯ ಕಾರ್ಯದರ್ಶಿಯವರು ರೈತರನ್ನು ಸುಲಿಗೆ ಮಾಡುತ್ತಾರೆ.

ಅಧ್ಯಕ್ಷರು : ಕೃಷ್ಣಮೂರ್ತಿಯವರೆ. ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅಷ್ಟಕ್ಕೆ ಕೃಷಿ ಸಚಿವರು ಉತ್ತರ ಕೊಡಲಿ. ಇಲ್ಲ. ತಾವು ಕಂದಾಯ ಸಚಿವರಿಗೆ ಹೇಳಿ ಏನಾದರೊಂದು amendment ಮಾಡಿ ಇಲ್ಲಾ ಅದನ್ನೇನಾದರೂ ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿ ಅಥವಾ ಕ್ಯಾಬಿನೆಟ್‌ಗೆ ತಂದು ದಯವಿಟ್ಟು ಆ ವಿಚಾರಕ್ಕೆ ಗಮನಹರಿಸಬೇಕು. ಕಂದಾಯ ಇಲಾಖೆಯ ಅಧಿಕಾರಿಗಳಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ : ಕೃಷಿ ಪುಸ್ತಕಕ್ಕೂ ಇದಕ್ಕೂ ದಯಮಾಡಿ ಸಂಬಂಧ ಕಲ್ಪಿಸಬೇಡಿ. ನಾನು ಮಂತ್ರಿಯಾಗಿದ್ದ ಸಂದರ್ಭದಲ್ಲಿ ಕೆಲವು ಸದಸ್ಯರು ಕೇಳಿದ್ದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೆ. ಇದಕ್ಕೆ ಏನು ಉತ್ತರ ಈಗ ಕೊಟ್ಟಿದ್ದಾರೋ ಅದೇ ಉತ್ತರವನ್ನು 10 ವರ್ಷಗಳ ಕೆಳಗೂ ಕೊಡುತ್ತಿದ್ದರು. ನಾವು ಆಗಲೇ ತೀರ್ಮಾನ ಮಾಡಿದ್ದೆವು. ಕೃಷಿ ಬುಕ್ ಎಂದರೆ. total land holding. ಅವನÀ soil ನಲ್ಲಿ ಏನು ಕೊರತೆ ಇದೆ. ಅದಕ್ಕೆ nutrient ಏನು ಹಾಕಬೇಕೆನ್ನವ ಸಲಹೆ ಕೊಡುವ ನಿಟ್ಟಿನಲ್ಲಿ ಒಂದು ಕೃಷಿ ಬುಕ್ ಕೊಡಬೇಕೆಂದು ಮಾಡಿದ್ದರು. ಈಗೇನಾದರೂ ಗೊಬ್ಬರ. ಬೀಜ ತೆಗೆದುಕೊಳ್ಳಬೇಕೆಂದರೆ. ಬಹುಶಃ ಅವರಿಗೆ ಸಿಗುವ Subsidy 100 ರೂ. ಆದರೆ. ಅವನು 200 ರೂ. ಖರ್ಚು ಮಾಡಬೇಕಾಗುತ್ತದೆ. ದಯಮಾಡಿ. ಕೃಷಿ ಪುಸ್ತಕವನ್ನು ಆದ್ಯತೆ ಮೇಲೆ ಕೊಡುವ ಕೆಲಸ ಮಾಡಿದರೆ. ದೊಡ್ಡ ಪುಣ್ಯ ಕಟ್ಟಿಕೊಳ್ಳುವ ಕೆಲಸವಾಗುತ್ತದೆ. ದಯಮಾಡಿ. ಅದರ ಬಗ್ಗೆ ಗಮನಹರಿಸಿ.

ಶ್ರೀ ಎಸ್.ಎ. ರವೀಂದ್ರನಾಥ್ : ಕಂದಾಯ ಇಲಾಖೆಯಿಂದ ಪಡೆದ ಸಣ್ಣ ರೈತರ ಪಟ್ಟಿಯನ್ನು ಪ್ರತಿ ರೈತ ಸಂಪರ್ಕ ಕೇಂದ್ರದಲ್ಲಿ ಇಡಲಾಗಿದೆ. ಇದರ ಆಧಾರದ ಮೇಲೆಯೇ ರೈತರ ಸಂಪರ್ಕ ಕೇಂದ್ರಗಳಿಂದ ಸವಲತ್ತುಗಳನ್ನು ರೈತರಿಗೆ ಕೊಡುವುದನ್ನು ಮಾಡಿದ್ದೇವೆ. ಈಗೇನು ಶಿವಶಂಕರರೆಡ್ಡಿಯವರು ಸಲಹೆ ಕೊಟ್ಟಿದ್ದಾರೆ. ಆ ರೀತಿ ಮುಂದಿನ ದಿನಗಳಲ್ಲಿ ಆ ಭಾಗದ Panchayat village Accountant. Revenue inspector. Tahsildar ಗೆ ಹೇಳಿ ಮುಂದಿನ ದಿನಗಳಲ್ಲಿ ಮಾಡುವಂಥದ್ದನ್ನು ಮಾಡುತ್ತೇವೆ. ಮಾನ್ಯ ಜಯಚಂದ್ರರವರು ಕೂಡ ಇದೇ ಕೃಷಿ ಇಲಾಖೆಗೆ ಹಿಂದೆ ಮಂತ್ರಿಯಾಗಿದ್ದರು. ಆಗ ಅವರು ಮಾಡಲಿಲ್ಲ. ಮಾಡುತ್ತೇವೆಂದು ಹೇಳಿಕೊಂಡು ಬಂದರು. ಆದರೆ. ನಾನು ಇದನ್ನು ಮಾಡಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ ; ಒಂದು ಸಲ ತಾವು ಸಭೆ ಕರೆದು ಬಿಡಿ. ನಾವು ಸಲಹೆಗಳನ್ನು ಅಲ್ಲಿ ಕೊಡುತ್ತೇವೆ. ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕಿಂತ ಆ ಸಭೆಯಲ್ಲಿ ಕುಳಿತು ಚರ್ಚೆ ಮಾಡುವುದು ಒಳ್ಳೆಯದು.

ಅಧ್ಯಕ್ಷರು : ಸಚಿವರೆ. ಈ ವಿಷಯಕ್ಕೆ ಸಂಬಂಧಿಸಿದಂತೆ. ಪ್ರತ್ಯೇಕವಾದ ಸಭೆ ಕರೆದುಬಿಡಿ.